ತಾರೀಖು 18ನೇ ಜನವರಿ 1896.

ನಂ. 6439.—ಆರ್. 2477—1896ನೇ ಇಸವಿ ಜನವರಿ 4ನೇ ಮತ್ತು ಂ 5779—ಆರ್. 2263ನೇ ನಂಬರ್ ಗವರ್ಮೆಂಟ್ ಇಸ್ತ್ರೀಹಾರ್ನಾಮೆಯಿಂದ ತುಮಕೂರು ಡಿಸ್ಟ್ರಿಕ್ಟ್ ಆಫೀಷಿಯೇಟಿಂಗ್ ಡೆಪ್ಯುಟಿ ಕಮ್ಮಿಷನರ್ ಮೆಸ್ಸರ್ಸ್ ಯಂ. ನಾರಾಯಣರಾಯರಿಗೆ ಕೊಡಲ್ಪಟ್ಟ 4 ದಿವಸಗಳ ಕ್ಯಾಜುಯಲ್ ರಜಾ ಇನ್ನೂ 2 ದಿವಸಗಳ ಪರಿಯಂತ ಜಾಸ್ತಿಮಾಡಲ್ಪಟ್ಟಿರುತ್ತೆ.

ನಂ. 6433.—ಆರ್. 2471.–1888ನೇ ಇಸವಿ IVನೇ ನಂಬರ್ ರೆಗ್ಯುಲೇಷ್ಯನ್‌ನೇ ಮೈಸೂರ್ ಲ್ಯಾಂಡ್ ರೆವಿನ್ಯೂ ಕೋಡಿನ 236ನೇ ಸೆಕ್ಷನ್ 2ನೇ ಪ್ಯಾರಾ ಅನುಸರಿಸಿ ಸದರೀ ಕೋಡಿನ VIII ವ IXನೇ ಅಧ್ಯಾಯಗಳ ನಿಯಮಗಳು ಹೊಸಕೋಟೆ ತಾಲ್ಲೂಕು ಗುಬ್ಬಿ ಹೋಬಳಿಗೆ ಕೇರಿದ ಜೋಡಿ ನಾಡಗವುಡ ಗೊಲ್ಲಹಳ್ಳಿಗೆ ಲಗಾವಾಗತಕ್ಕದ್ದಾಗಿ ಮೈಸೂರು ಸರ್ಕಾರದವರು ಆಜ್ಞಾಪಿಸುತ್ತಾರೆ.

ನಂ. 6436.—ಆರ್. 2474.—ಕ್ಲೋಸ್‌ಪೇಟೆ ಸಬ್ ಡಿವಿಜ್ ಆಫಿಸರ್ ಮೆಸ್ಸರ್ಸ್ ಸಿ. ರಾಘವಾಚಾರ್ಲು ಯವರಿಗೆ 1895ನೇ ಇಸವಿ ನವಂಬರ್ 30ನೇ ಮತ್ತು ಂ. 4958 ಆರ್. 1929ನೇ ನಂಬರ್ ಗವರ್ಮೆಂಟ್ ಇಸ್ತಿಹಾರ್ನಾಮೆಯಿಂದ ಕೊಡಲ್ಪಟ್ಟ ಮೂರು ದಿವಸಗಳ ಕ್ಯಾಜುಯಲ್ ರಜಾ ಪೈಕಿ ಬಂದು ದಿವಸದ ರಜಾ ಮಾತ್ರ ಅವರುಪಯೋಗಿಸಿಕೊಂಡಿರುತ್ತಾರಾಗಿ ಉಳಿದ ಭಾಗದ ರಜಾ ಅಂದರೆ ಎರಡು ದಿವಸಗಳು ಇದರಿಂದ ರದ್ದುಮಾಡಲ್ಪಟ್ಟಿರುತ್ತೆ.

ಹುಕುಂ ಬಮೋಜೀಬ್,
ಸಿ. ಶ್ರೀನಿವಾಸಯ್ಯಂಗಾರ್,
ರೆವಿನ್ಯೂ ಸೆಕ್ರಟೆರಿ.

ಜನರಲ್.

ತಾರೀಖು 7ನೇ ಜನವರಿ 1896.

ನಂ. 7570.—ಮಿ. 1096.—ಫೆಬ್ರವರಿ ಗುರ್ರೇ ತಾರೀಖು, ಮೈಸೂರು ಶ್ರೀಮ್ ಮಹಾರಾಜರವರು ಪಟ್ಟಾಭಿಷಿಕ್ತರಾದ ಶುಭದಿನವಾದುದರಿಂದ ಆ ದಿವಸ ಸಂಸ್ಥಾನಾಮುಳಿ ವಟ್ಟು ರಜಾ ದಿವಸವೆಂದು ಆಚರಿಸಲ್ಪಡತಕ್ಕದ್ದು.

ತಾರೀಖು 15ನೇ ಜನವರಿ 1896.

ನಂ. 7853.—ಲೋ. ಫಂ. 257—92.—1894ನೇ ಇಸವಿಯ VIIನೇ ನಂಬರ್ ಲ್ಯಾಂಡ್ ಅಕ್ವಿಜಿಷ್ನ್ ರೆಗ್ಯುಲೇಷನಿನ ನಿಯಮಗಳನುಸರಿಸಿ, ಇದರಿಂದ ಪ್ರಕಟಪಡಿಸುವದೇನಂದರೆ,—ಇದರಡಿ ಕಂಡ ಕಟ್ಟಗಳು ಸರ್ಕಾರ್ ಕೆಲಸಕ್ಕೆ ಅಂದರೆ ಚಿತ್ರದುರ್ಗದ ಡಿಸ್ಟ್ರಿಕ್ಟ್ ಹರಿಹರ ಮ್ಯುನಿಸಿಪಾಲಿಟಿಯಲ್ಲಿ ಕುಂಬಾರಕೆರೆಗೆ ಹೋಗುವ ರಸ್ತೆಯನ್ನೂ ಮತ್ತು ನಡುವಾಲಪೇಟೆ ರಸ್ತೆಯನ್ನೂ ಸುಧಾ ಬಡಾಯಿಸುವ ಬಗ್ಗೆ ಬೇಕಾಗಿರುತ್ತೆ.

ಕ್ರಮ ನಂಬರು.	ಬೀದಿಯ ಹೆಸರು.	ಬಾಗಿಲು ನಂಬರು.	ಸ್ವಂತಗಾರರ ಹೆಸರು.	ಜಾಗಾದ ವಿಸ್ತೀರ್ಣ. ಉದ್ದ ಗಜಗಳು.	ಅಗಲ	ವಿವರಣೆ.	ಚಕ್ಕುಬಂದಿ. ಉತ್ತರಕ್ಕೆ.	ದಕ್ಷಿಣಕ್ಕೆ.	ಪೂರ್ವಕ್ಕೆ.	ಪಶ್ಚಿಮಕ್ಕೆ.
1	..	127	ಪುಟ್ಟನರಸಪ್ಪ ಬಿ ರಾಮಪ್ಪ	10	7	ಹಂಚಿನ ಮನೆ	ಶ್ರೀನಿವಾಸರಾಯರ ಮನೆ	ಸ್ವಂತಗಾರರ ಮನೆಯ ಉಳಿದ ಭಾಗ	ನೀಲಿ ಹಯಾತ್‌ಸಾಬರ ಮನೆ	ಹೊಸದಾಗಿ ಬಡಾಯಿಸ ಬೇಕಾದ ರಸ್ತೆ
2	..	695	ಸೊಲ್ಲಾಪುರದ ಹಾಲಪ್ಪ	24	8	ಹಂಚು, ಮಂಣು ಮಾಳಿಗೆ ಕೇರಿರುವ ಭಾಗ	ಸ್ವಂತಗಾರರ ಮನೆಯ ಉಳಿದ ಭಾಗ	ಸಾಬನೂರು ವೀರಲಿಂಗಪ್ಪನವರ ಮನೆ	ಗವುಡಗೆರೆ ಮುನಿಯನ ಮನೆ	ರಸ್ತೆ

ತಾರೀಖು 17ನೇ ಜನವರಿ 1896.

ನಂ. 8022.—ಯು. 217.—ಮೈಸೂರು ಸರ್ವಿಸ್ ರೆಗ್ಯುಲೇಷನ್‌ಗಳ 218ನೇ ಆರ್ಟಿಕಲ್ ಮೇರೆ, ಮೈಸೂರು ಶ್ರೀಮ್ ಮಹಾರಾಣಿಯವರ ಬಾಲಿಕಾ ಪಾಠಶಾಲೆಯ ಲೇಡೀ ಸೂಪರ್‌ಟೆಂಡೆಂಟರಿಗೆ ಅಸಿಸ್ಟೆಂಟರಾದ ಮಿಸ್. ಫೋನಾಲ್‌ಯವರಿಗೆ, 1895ನೇ ಇಸವಿ ಸೆಪ್ಟಂಬರ್ 20ನೇ ಮತ್ತು ಂ ಟಾಗಾಯತು ಡಿಸೆಂಬರ್ 17ನೇ ಮತ್ತು ಂ ವರೆವಿಗೆ ಮೆಡಿಕಲ್ ಸರ್ಟಿಫಿಕೇಟಿನ ಮೇಲೆ ರಜಾ ಕೊಡಲ್ಪಟ್ಟಿತು.

ತಾರೀಖು 18ನೇ ಜನವರಿ 1896.

ನಂ. 8080.—ಲೋ. ಫಂ. 399—92.—1892ನೇ ಇಸವೀಲಿ ನೇಮಕವಾದ ಹೊದಲು ವಿಸಿಟಿಂಗುಗಳಿಗೆ ಯಡೆಬಿಡದೆ ಸ್ಯೆರಹಾಜರಾಗೋಣದರಿಂದ ಸ್ಥಳವನ್ನು ಖಾಲೀ ಮಾಡಿದ ಮೆಸ್ಸರ್ಸ್ ಕುಂಭಕೋಣಿದ ಸುಬ್ಬಣ್ಣಾಚಾರ್ಯರಿಗೆ ಬದಲುಗಿ ಮಂಜರಾಬಾದಿಗೆ ಕೇರಿದ ಅಬ್ಬನಯ್ಯ ಸ್ಟೇಟಿನ ಮೆಸ್ಸರ್ಸ್ ಬೆ. ಜಿ. ಹೆಚ್. ಶ್ಯಾಫರ್ಡ್‌ಯವರು ಹೊಸನೆದ ಸರ್ಕಲ್ ಡಿಸ್ಟ್ರಿಕ್ಟ್ ಫಂಡ್ ಬೋರ್ಡಿನ ಮೆಂಬರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 21ನೇ ಜನವರಿ 1896.

ನಂ. 8313.—ಜು. 910.—ಮೈಸೂರು ಸಬಾರ್ಡಿನೇಟ್ ಜಡ್ಜ್ ಮೆಸ್ಟರ್ ಯಸ್. ಆರ್. ಸುಬ್ಬರಾಯ ಅಯ್ಯರ್ ಯವರಿಗೆ, ಮೈಸೂರ ಸರ್ವಿಸ್ ರಗ್ಯುಲೇಷ್ಯಗಳ 174ನೇ ಆರ್ಟಿಕಲ್ ಮೇರೆ, 1896ನೇ ಇಸವಿ ಫಿಬ್ರವರಿ 3ನೇ ತಾರೀಖಿನಾರಭ್ಯ ಆಥವಾ ಅವರ ದನ್ನುಪಯೋಗಿಸಿಕೊಳ್ಳುವ ಮತ್ತೊಂದು ತಾರೀಖಿನಿಂದ 10 ದಿವಸಗಳ ಕ್ಯಾಜುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 8261.—ಲೇ. ಫಂ. 197—92.—ಬೆಂಗಳೂರು ಷಹರ್ ಮ್ಯುನಿಸಿಪಾಲಿಟಿಯ ವೈಸ್ ಪ್ರೆಸಿಡೆಂಟರಾದ ಮೆಸ್ಟರ್ ಕೆ. ಶ್ರೀನಿವಾಸರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಮೂರು ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಹುಕುಂ ಬವೋಜೀಬ್,
ವಿ. ಎ. ನರಸಿಂಹಯ್ಯಂಗಾರ್,
ಜನರಲ್ ಸೆಕ್ರಟೆರಿ.

ಮುಜರಾಯಿ ಇಲಾಖೆ.

ನೋಟಿಫಿಕೇಷನ್.

ನಂ. 738. 11ನೇ ಜನವರಿ 1896ನೇ ಇಸವಿ, ಬೆಂಗಳೂರು.

ಚಾಮರಾಜನಗರ ತಾಲ್ಲೂಕಿಗೆ ಸೇರಿದ ಮುಜರಾಯಿ ವಿಚಾರಣೆಗೆ ಬಳಪಟ್ಟ ಛತ್ರ ಮತ್ತು ದೇವಸ್ಥಾನಗಳಿಗೆ ಈ ಕೆಳಗೆ ನಮೂ ದಿಸುವಂತೆ ಆಯಾಯ ಜನಗಳನ್ನು ಧರ್ಮದರ್ಶಿಗಳನ್ನಾಗಿ ನೇಮಿಸಿ ಇದೆ.

	ಛತ್ರ ದೇವಸ್ಥಾನಗಳ ಹೆಸರು.		ಧರ್ಮದರ್ಶಿಗಳ ಹೆಸರು.
I.	ಚಾಮರಾಜನಗರ ಅನ್ನಛತ್ರ.	(1)	ಚಾಮರಾಜನಗರದಲ್ಲಿರುವ ನವಿಜೋಯಿಸರ ಪುಟ್ಟಣ್ಣನವರು
		(2)	ಚಾಮರಾಜನಗರದಲ್ಲಿರುವ ಧಾರಾಪುರಂ ಗೋಪಾಲರಾಯರು
		(3)	ದಾಸಬಣಜಿಗರ ವೆಂಕಟ ಶಟ್ಟರು
II.	ಚಾಮರಾಜನಗರದಲ್ಲಿರುವ ಶ್ರೀ ಚಾಮ ರಾಜೇಶ್ವರ ಸ್ವಾಮಿಯವರ ದೇವಸ್ಥಾನ	(1)	ಪೆರ್ಷ್ ಸಬ್ ಡೆಪ್ಯುಟಿ ಇನ್‌ಸ್ಪೆಕ್ಟರ್ ದಾಸಪ್ಪನವರು
		(2)	ಪೆರ್ಷ್ ಹೆಡ್ ಗುಮಾಸ್ತೆ ಸುಬ್ಬರಾಯರು
		(3)	ಧಾರಾಪುರಂ ಗೋಪಾಲ ರಾಯರು
		(4)	ಸುಬ್ರಾಯ ಶಟ್ಟರು
III.	ಗುಡ್ಡದ ಮಠದ ವೀರಭದ್ರಸ್ವಾಮಿ ದೇವಸ್ಥಾನ	(1)	ಅಮಚವಾಡಿಯಲ್ಲಿರುವ ವೆಂಕಟಸುಬ್ಬರಾಜೆ ಅರಸಿನವರು
		(2)	ವೆಂಕಟಯ್ಯನ ಛತ್ರದಲ್ಲಿರುವ ಯಜಮಾನ ಶ್ರೀನಿವಾಸಯ್ಯಂಗಾರು
		(3)	ವೆಂಟಯ್ಯನ ಛತ್ರದ ಪಟೇಲ್ ಶಾಂತ ಗವುಡರು
		(4)	ಅಮಚವಾಡಿ ಪಟೇಲ್ ಪುಟ್ಟಮಾದನಾಯಕರು
IV.	ವೆಂಕಟಯ್ಯನ ಛತ್ರದ ವೆಂಕಟರಮಣ ಸ್ವಾಮಿ ದೇವಸ್ಥಾನ	(1)	ಗದಾಧರಂ ವೆಂಕಟಾಚಾರು
		(2)	ಯಜಮಾನ ಶ್ರೀನಿವಾಸಯ್ಯಂಗಾರು
		(3)	ಪಟೇಲ್ ಶಾಂತಗವುಡರು
V.	ಹರದನಹಳ್ಳಿ ದಿವ್ಯಲಿಂಗೇಶ್ವರ ಸ್ವಾಮಿ ಮತ್ತು ಗೋಪಾಲಕೃಷ್ಣಸ್ವಾಮಿ ದೇವಸ್ಥಾನ	(1)	ವಕೀಲ್ ಲಕ್ಷ್ಮೀನಾರಣಪ್ಪನವರು
		(2)	ಬನವಾಪುರದ ಶಾನುಭೋಗ ಸುಬ್ಬರಾಯರು
		(3)	ಹರದನಹಳ್ಳಿ ಶಾನುಭೋಗ ಅಶ್ವತ್ಥಯ್ಯನವರು
		(4)	ವೆಂಕಟ ಶಟ್ಟು

ಹುಕುಂ ಬವೋಜೀಬ್,
ಎ. ಶ್ರೀನಿವಾಸಾಚಾರ್ಲು,
ಮುಜರಾಯಿ ಸೂ. ಅಂಡ್ ಸೆಕ್ರಟೆರಿ.